# ಎಸ್. ದಿವಾಕರ್ ಕವಿತೆಗಳು



## ಝೀಬ್ರಾ

ಆಫ್ರಿಕಾದಲ್ಲೂ ಅಪರೂಪವಂತೆ
ಝೀಬ್ರಾ ಈ ದಿನಗಳಲ್ಲಿ

ಯಾಕೋ ಏನೊ ಮೃಗಾಲಯದಿಂದಲೂ
ಝೀಬ್ರಾ ಪರಾರಿ

ಬಿಳಿಯ ಮೈಮೇಲೆ ಕಪ್ಪು ಪಟ್ಟೆಗಳೋ
ಕಪ್ಪು ಮೈಮೇಲೆ ಬಿಳಿಯ ಪಟ್ಟೆಗಳೋ
ಇಲ್ಲದಿದ್ದರೆ
ಝೀಬ್ರಾವೊಂದು ಕತ್ತೆಯಷ್ಟೆ

ಆದಕ್ಕೇ ಇರಬೇಕು ಈಗ ನಮ್ಮದೇ
ಮಾಲುಗಳಲ್ಲಿ
ಝೀಬ್ರಾ ಪಟ್ಟೆಗಳಿರುವ ಬ್ರಾ
ಚಡ್ಡಿ ಸೀರೆ ಚುಡೀದಾರ್ ಟೀಷರ್ಟು ಜರ್ಸಿ ಟ್ರೌಜರು
ಟರ್ಕೀ ಟವಲು ಕೂಡ

ಸಖತ್ ಬಿಕರಿಯಂತೆ ಈ ದಿನಗಳಲ್ಲಿ

ಕಲೆ: ಸೃಜನ್